# ಕರ್ತರಿ ಕರ್ಮಣಿ

ಪ್ರೀತಿಸುವುದು
ಮತ್ತು ಪ್ರೀತಿಸಲ್ಪಡುವುದು
ಈ ಕರ್ತರಿ ಕರ್ಮಣಿ ಪ್ರಯೋಗ
ಗಳ ಮೇಲೆ ಬರೆದೊಂದು ಕಥೆ ಓದಿದ್ದೆ
ಬಹುತೇಕ 'ಕಸ್ತೂರಿ'ಯಲ್ಲಿ
ಐವತ್ತೊಂದು ವರ್ಷದ ಕೆಳಗೆ
ಅನುವಾದದ್ದು
ಮಲೆಯಾಳದಿಂದಲೋ? ಮರೆತಿರುವೆ

ಯಾವುದು ಸುಖ?
ಪ್ರೀತಿಸಲ್ಪಡುವುದೋ, ಪ್ರೀತಿಸುವುದೋ?
ಈಗ ಉತ್ತರ ಖಚಿತವಾಗಿದೆ
ಪ್ರೀತಿಸುವುದೇ ಸುಖ
ಅದು ನಮ್ಮದೇ ಕೈಯಲ್ಲಿದೆ

ಯಾವಾಗಲೂ ಅಷ್ಟೆ
ನಾವು ನರಜೀವರು ನಂಬಬೇಕು
ನಮ್ಮ ಕೈಯಾಸೆಯಲ್ಲಿರುವುದನ್ನು
ಸುಖಿಸಬೇಕು ಅದನ್ನು



